ಶ್ರೀ ಟಿ. ಚೆನ್ನಯ್ಯ.—ಹಿಂದೆ ಇದು ಐ.ಪಿ.ಸಿ. ರಸ್ತೆಯಾಗಿತ್ತು; ಆದಕಾರಣ ರಸ್ತೆಗೆ ಆಗತಕ್ಕ ಹಣವನ್ನು ಜಿಲ್ಲಾಬೋರ್ಡ್ ಕೊಡಬೇಕಾಗಿತ್ತು; ಈಗ 'ಲ್ಯಾಂಡ್ ರೆವಿನ್ಯೂ ಅಸ್ಸೆಟ್ಸ್' ನಿಂದ ಕೊಡಲಾಗಿದೆ, ಅದರಿಂದ ಅವರು ಕೊಡಬೇಕು.

ಶ್ರೀ ಬಿ. ಸಿ. ನಂಜುಂಡಯ್ಯ.—ತಾವು 'ಲ್ಯಾಂಡ್ ರೆವಿನ್ಯೂ ಅಸ್ಸೆಟ್ಸ್' ಹಣವನ್ನು ಹಂಚುವಾಗ ಎಲ್ಲೆಲ್ಲಿ ಐ.ವಿ.ಸಿ. ರಸ್ತೆಗಳಿವೆಯೋ ಅಲ್ಲೆಲ್ಲಾ ಹಾಗೆಯೇ ಮಾಡುತ್ತೀರಾ?

ಶ್ರೀ ಟಿ. ಚೆನ್ನಯ್ಯ.—ಕೆಲವು ಕಡೆ ಮಾಡಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಹಿಂದೆ ಲ್ಯಾಂಡ್ ರೆವಿನ್ಯೂ ಅಸ್ಸೆಟ್ಸ್‌ಮೆಂಟ್ ಮಾಡಿದಾಗ ಹೀಗೆ ಮಾಡಲಲ್ಲವೆಂಬುದು ಗೊತ್ತಿದೆಯೆ?

ಶ್ರೀ ಟಿ. ಚೆನ್ನಯ್ಯ.—ಹಣವನ್ನು ಕೊಟ್ಟಿರಲಿಲ್ಲ, ಅದರಿಂದ ನಿಧಾನವಾಯಿತು.

ಶ್ರೀ ಬಿ. ಸಿ. ನಂಜುಂಡಯ್ಯ.—ಬೇರೆಯವರ ತಪ್ಪಿಗಾಗಿ ಪಂಚಾಯಿತಿಯವರು ಇದನ್ನು ಕೊಡಬೇಕೆಂದು ಮಾಡಿದ್ದೀರಾ?

ಶ್ರೀ ಟಿ. ಚೆನ್ನಯ್ಯ.—ಹಾಗಲ್ಲ, ಅವರಲ್ಲಿ ಬೇರೆ ಹಣವಿಲ್ಲದಿದ್ದುದರಿಂದ ಲ್ಯಾಂಡ್ ರೆವಿನ್ಯೂ ಅಸ್ಸೆಟ್ಸ್‌ಮೆಂಟ್ ಹಣದಿಂದ ಕೊಡಬೇಕೆಂದು ಮಾಡಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಸಂಬಂಧಪಟ್ಟ ಇಲಾಖೆಯವರು ಈ ರಸ್ತೆಯನ್ನು ಮಾಡಿದಾಗಲೇ ಜಮೀನಿಗೆ ಕಾಂಪೆನ್‌ಸೇಷನ್ ಕೊಟ್ಟಿದ್ದರೆ, ಹೀಗೆ ಪಂಚಾಯಿತಿಯವರು ಕೊಡಬೇಕಾದ ಸಂಭವವಿರಲಲ್ಲ ಅಲ್ಲವೆ?

ಶ್ರೀ ಟಿ. ಚೆನ್ನಯ್ಯ.—ಯಾವರೀತಿ ಕೊಡಬೇಕೆಂದು ಪರಿಶೀಲನೆಮಾಡಿ, ಆಗ ಹಣವಿಲ್ಲದಿದ್ದುದರಿಂದ ಈರೀತಿ ಮಾಡಲಾಗಿದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ನಾನು ಕೇಳುತ್ತಿರುವುದು, ಈ ರಸ್ತೆಯನ್ನು ಪ್ರಾರಂಭಮಾಡಿದಾಗ ಸಂಬಂಧಪಟ್ಟ ಇಲಾಖೆಯವರು ಕಾಂಪೆನ್‌ಸೇಷನ್ ಹಣವನ್ನು ಆಗಲೇ ಗೊತ್ತುಮಾಡಿ ಕೊಡದೇ ಇದ್ದುದರಿಂದ ಈಗ ಪಂಚಾಯಿತಿಯವರು ಕೊಡಬೇಕಾಯಿತಲ್ಲವೆ?

ಶ್ರೀ ಟಿ. ಚೆನ್ನಯ್ಯ.—ನಾನು ಮೊದಲೇ ಹೇಳಿದ ಹಾಗೆ, ಇದು ಐ.ವಿ.ಸಿ. ರಸ್ತೆಯಾದುದರಿಂದ ಪಬ್ಲಿಕ್ ವರ್ಕ್ಸ್ ಇಲಾಖೆ ಕೊಡುವಹಾಗಿಲ್ಲ.

ಶ್ರೀ ಬಿ. ಸಿ. ನಂಜುಂಡಯ್ಯ.—ಎಲ್ಲೆಲ್ಲಿ ಐ.ವಿ.ಸಿ. ರಸ್ತೆಗಳಿವೆಯೋ ಅಲ್ಲೆಲ್ಲಾ ಹೀಗೆ ಮಾಡುತ್ತೀರಾ?

ಶ್ರೀ ಟಿ. ಚೆನ್ನಯ್ಯ.—ಎಲ್ಲ ಸ್ಥಳಗಳಲ್ಲಿಯೂ ಇಲ್ಲ, ಕೆಲವು ಸಂದರ್ಭಗಳಲ್ಲಿ ಮಾತ್ರ.

ಶ್ರೀ ಬಿ. ಸಿ. ನಂಜುಂಡಯ್ಯ.—ಹೊಸದಾಗಿ ಬಂದಿರುವ ಕಾನೂನು ಪ್ರಕಾರ ಲ್ಯಾಂಡ್ ರೆವಿನ್ಯೂ ಅಸ್ಸೆಟ್ಸ್‌ಮೆಂಟ್‌ನಿಂದ ಹಣವನ್ನು ಕೊಟ್ಟದ್ದರಿಂದ ತಾನೆ ಹೀಗೆ ಪಂಚಾಯಿತಿಗಳಿಂದ ವಸೂಲು ಮಾಡುತ್ತಿರುವುದು?

ಶ್ರೀ ಕಡಿದಾಳ್ ಮಂಜಪ್ಪ.—ಎಲ್ಲಾ ಐ.ವಿ.ಸಿ. ರಸ್ತೆಗಳಿಗೂ ಅವರು ಖರ್ಚುಕೊಡತಕ್ಕ ಸಂಭವವಿಲ್ಲ. ಕೆಲವು ರಸ್ತೆಗಳ ಸಂಬಂಧದಲ್ಲಿ ಈ ಹಣವನ್ನು ಕೊಡುವುದಕ್ಕೆ ಪಬ್ಲಿಕ್‌ವರ್ಕ್ಸ್ ಇಲಾಖೆಯ ಜವಾಬ್ದಾರಿಯಿಲ್ಲದಿರುವುದರಿಂದ ಈ ಹಣವನ್ನು ಗ್ರಾಮಪಂಚಾಯಿತಿಗೆ ಕೊಡತಕ್ಕ ರೆವಿನ್ಯೂ ಅಸ್ಸೆಟ್ಸ್‌ಮೆಂಟಿನಿಂದ ಕೊಡಲಾಗುತ್ತದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ಒಂದು ರಸ್ತೆಗೆ ಆ ಪಂಚಾಯಿತಿಯ ಲ್ಯಾಂಡ್ ರೆವಿನ್ಯೂ ಅಸ್ಸೆಟ್‌ಮೆಂಟ್ ಹಣ ನಿಮ್ಮ ಕೈಯಲ್ಲರುವ ಕಾರಣದಿಂದ ಹೀಗೆ ಮಾಡಿದ್ದೀರಲ್ಲವೆ?

ಶ್ರೀ ಕಡಿದಾಳ್ ಮಂಜಪ್ಪ.—ಈ ರಸ್ತೆಗಳಿಂದ ಈ ಗ್ರಾಮಗಳಿಗೆ ಅನುಕೂಲವಾಗುವುದರಿಂದ ಆಯಾ ಗ್ರಾಮ ಪಂಚಾಯಿತಿಯವರೇ ಹಣವನ್ನು ಕೊಡಬೇಕಾಗುತ್ತದೆ.

ಶ್ರೀ ಬಿ. ಸಿ. ನಂಜುಂಡಯ್ಯ.—ಈ ರಸ್ತೆ ಆದುದು ಯಾವುದೋ ಕಾಲದಲ್ಲ. 1952ರಲ್ಲಿ ಒಂದು ಕಾನೂನಾಗಿ ಅದರ ಪ್ರಕಾರ ಲ್ಯಾಂಡ್ ರೆವಿನ್ಯೂ ಅಸ್ಸೆಟ್‌ಮೆಂಟ್ ಶೇಕಡ 12½ ಕೊಡಬೇಕೆಂದು ಮಾಡಿದರೆ ಈಗ ಹೀಗೆ ಮಾಡುವುದು ಯುಕ್ತವೆ, ಧರ್ಮವೆ?

ಶ್ರೀ ಕಡಿದಾಳ್ ಮಂಜಪ್ಪ.—ಗ್ರಾಮಗಳಿಗಾಗಿ ಈ ರಸ್ತೆಗಳನ್ನು ಮಾಡಿದ್ದರಿಂದ, ಆ ಗ್ರಾಮಗಳಿಗೆ ಸರ್ಕಾರದವರೇ ಕೊಟ್ಟ ಹಣದಿಂದ ಕೆಲವು ಭಾಗವನ್ನು ರಸ್ತೆಗಳಿಗಾಗಿ ಕೊಡುವುದರಲ್ಲಿ ಧರ್ಮವೂ ಇದೆ, ನ್ಯಾಯವೂ ಇದೆ.

Road works taken by District Board in Bangalore North and Devanahalli Taluks.

Q.—518. **Sri K. V. BYRE GOWDA** (Bangalore North).—

Will the Government be pleased to state:—

(*a*) the names of roads, the works of which are undertaken by the District Board in Bangalore North and Devanahalli Taluks up-to-date;

(*b*) the names of roads which are still remaining to be repaired;

(*c*) whether the roads constructed with the help of the Red Cross Society by way of relief measures in the said taluks have been taken by the District Board;

(*d*) the length and the particular portion taken over by the District Board in each road;

(*e*) whether steps have been taken to metal the said roads?

A.—**Sri T. CHANNIAH** (Minister for Public Health and Local Self-Government).—

(*a*) Please see list appended.
(*b*) Nil.
(*c*) Not yet.
(*d*) Does not arise.
(*e*) No.

(SRI T. CHANNIAH.)

List showing the names of roads works undertaken by the Bangalore District Board in Bangalore North and Devanahalli Taluks.

Sl. No.	*Name of road*	*Taluk*
1.	Tarring a road from Nagavara to Jakkur	Bangalore North
2.	Road from Seekote to Hessaraghatta Travellers' Bungalow.	Do
3.	Road from Hoskerehalli to Bangalore-Mysore Road to join near Government Electric Factory.	Do
4.	Metalling 3 furlongs in the 11th mile of Hennur-Kannur road.	Do
5.	Improving one furlong in the 5th mile and three furlongs in the 7th mile of Bettahalli road.	Do
6.	Improving Devanhalli-Sulibele road	Devanahalli
7.	Improving Bettahalasur approach road ...	Do
8.	Improving Tindlu-Uganavadi road (I.V.C.) ...	Do
9.	Metalling bad furlongs in Hennur-Kannur road ...	Do
10.	Metalling three furlongs of Rajankunte Grass Farm Road	Bangalore North
11.	Special repairs to Devarajeevanahalli Road ...	Do
12.	Improving the Chaprakal Dinne Road ...	Devanahalli
13.	Metalling the Rajankunte Road ...	Do
14.	Continuation of Uganavadi road to connect Bangalore-Dodballapur Road *via* Ardesahalli.	Do
15.	Continuation of Hennur-Bagalur Road to Devanahalli-Budigere Road.	Do
16.	Channarayapatna-Aibasapura Road ...	Do

ಶ್ರೀ ಕೆ. ವಿ. ಬೈರೇಗೌಡ.—ಉತ್ತರದ ಪರಿಶಿಷ್ಟ ದಲ್ಲಿ ನಾಗಾವರದಿಂದ ಜಕ್ಕೂರಿಗೆ ಹೋಗುವ ರಸ್ತೆಗೆ ತಾರು ಹಾಕುವುದು ಎಂದು ನಮೂದಿಸಿದೆ, ಈ ಕಾಮಗಾರಿಯನ್ನು ತೆಗೆದುಕೊಂಡಿದ್ದಾರೆಯೆ?

ಶ್ರೀ ಟಿ. ಚನ್ನಯ್ಯ.—ಇನ್ನೂ ಇಲ್ಲ.

ಶ್ರೀ ಕೆ. ವಿ. ಬೈರೇಗೌಡ.—ಜಿಲ್ಲಾ ಬೋರ್ಡಿನವರು ಅಂದಾಜು ಮಾಡಿದ್ದಾರೆಯೆ?

ಶ್ರೀ ಟಿ. ಚನ್ನಯ್ಯ.—Proposals ಮಾಡಿದ್ದಾರೆ, ಜಾಗ್ರತೆ ಕೆಲಸ ಮಾಡಬೇಕೆಂದು ಸೂಚನೆ ಕೊಡಲಾಗುತ್ತದೆ.

ಶ್ರೀ ಕೆ. ವಿ. ಬೈರೇಗೌಡ.—ದೇವನಹಳ್ಳಿ ಬೂದಿಗೆರೆ ರಸ್ತೆ ನಾಲ್ಕುಮೈಲಿ ಮಾತ್ರ ಪಬ್ಲಿಕ್‌ವರ್ಕ್ಸ್ ಇಲಾಖೆ ತೆಗೆದುಕೊಂಡು ಮಿಕ್ಕದ್ದು ಹಾಗೆಯೇ ಬಿಟ್ಟರೆ ಅದನ್ನು ಪಬ್ಲಿಕ್‌ವರ್ಕ್ಸ್ ಇಲಾಖೆ ಮಾಡಬೇಕೇ ಅಥವಾ ಡಿಸ್ಟ್ರಿಕ್ಟ್ ಬೋರ್ಡ್ ಮಾಡಬೇಕೇ?

ಶ್ರೀ ಟಿ. ಚನ್ನಯ್ಯ.—ನೋಟೀಸ್.

ಶ್ರೀ ಕೆ. ವಿ. ಬೈರೇಗೌಡ.—ನಾಲ್ಕೈದು ಮೈಲಿ ಮಾತ್ರ ಪಬ್ಲಿಕ್‌ವರ್ಕ್ಸ್ ಇಲಾಖೆಗೆ ತೆಗೆದುಕೊಂಡಿದ್ದಾರೆ, ಬಾಕಿ ಹಾಗೆಯೇ ಬಿಟ್ಟಿದ್ದಾರೆ. ಹಿಂದೆ ಇದನ್ನೂ ಸ್ಪೇಟ್ ಫಂಡ್ ರಸ್ತೆಯಾಗಿ ಮಾಡುತ್ತೇವೆಂದು ಹೇಳಿದ್ದರು, ಅದನ್ನೇನು ಮಾಡಿದ್ದಾರೆ?

ಶ್ರೀ ಕಡಿದಾಳ್ ಮಂಜಪ್ಪ.—ಸ್ಪೇಟ್ ಫಂಡ್ ರಸ್ತೆಯಾಗಿ ಪರಿವರ್ತನೆಯಾಗಿದ್ದರೆ ಪಬ್ಲಿಕ್‌ವರ್ಕ್ಸ್ ಇಲಾಖೆಯವರು ನೋಡಿಕೊಳ್ಳುತ್ತಾರೆ.

ಶ್ರೀ ಎ. ವಿ. ನರಸಿಂಹರೆಡ್ಡಿ.—ಐದು ಮೈಲಿ ಮಾತ್ರ ಪಬ್ಲಿಕ್ ವರ್ಕ್ಸ್‌ನವರು ತೆಗೆದುಕೊಂಡಿದ್ದಾರೆ, ಮಿಕ್ಕದ್ದು ಏನು ಮಾಡುತ್ತಾರೆಂಬುದು ಅವರ ಪ್ರಶ್ನೆ.

ಶ್ರೀ ಕಡಿದಾಳ್ ಮಂಜಪ್ಪ.—ಅದನ್ನು ನೆನಪಿನಿಂದ ಹೇಳುವುದಕ್ಕಾಗುವುದಿಲ್ಲ, ನೋಡಿ ಹೇಳಬೇಕು.

ಶ್ರೀ ಬಿ. ಚಿಕ್ಕಣ್ಣ.—ಒಂದೆಕಡೆಗೆ ಎಷ್ಟುಹಣ ಕೊಡಬೇಕೆಂದು ನಿಗದಿಮಾಡಿದ್ದೀರಿ?

ಶ್ರೀ ಟಿ. ಚನ್ನಯ್ಯ.—ಅನೇಕ ಸರ್ವೆ ನಂಬರುಗಳನ್ನು ಅಕ್ವೈರ್ ಮಾಡಿರುವುದರಿಂದ ಬೇರೆ ಬೇರೆ ಜಮೀನುಗಳಿಗೆ ಮಾರ್ಕೆಟ್‌ಬೆಲೆ ಏನಿದೆಯೋ ಅದರ ಪ್ರಕಾರ ನಿಗದಿಮಾಡುತ್ತಾರೆ.

ಶ್ರೀ ಬಿ. ಚಿಕ್ಕಣ್ಣ.—ಅನೇಕ ರೈತರು ಹಣಬೇಡ, ಜಮೀನುಬೇಕೆಂದು ಕೇಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಚನ್ನಯ್ಯ.—ಸರ್ಕಾರದ ಗಮನಕ್ಕೆ ಬಂದಿಲ್ಲ; ಈಗ ಅಕ್ವೈರ್ ಮಾಡಿಕೊಂಡಿರುವ ಸರ್ವೆ ನಂಬರುಗಳಿಗೆಲ್ಲ ಹಣದ ರೂಪದಲ್ಲಿ ಪರಿಹಾರ ಕೊಟ್ಟಿದೆ.

ಶ್ರೀ ಬಿ. ಚಿಕ್ಕಣ್ಣ.—ಈಗ ಅಕ್ವೈರ್ ಮಾಡಿರುವುದಕ್ಕೆ ಹಣವನ್ನು ಕೊಟ್ಟಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಕೊಡಲಾಗಿದೆ.

ಶ್ರೀ ಬಿ. ಚಿಕ್ಕಣ್ಣ.—ಹತ್ತು ವರ್ಷಗಳ ಹಿಂದೆ ಅಕ್ವೈರ್ ಮಾಡಿಕೊಂಡ ಜಮೀನಿಗೆ ಪ್ರತಿಯಾಗಿ ಜಮೀನು ಕೊಡುವುದು ಪರ್ಯಾಲೋಚನೆಯಲ್ಲಿದೆ ಎಂದು ಹೇಳಿದೆ; ತೊಂದರೆ ಏನು?

ಶ್ರೀ ಟಿ. ಚನ್ನಯ್ಯ.—ನೋಟೀಸ್.